

# ವಿಶ್ವದಾಖಲೆಯ ರಬ್ಬರ್ ಚೆಂಡು!

ಚಿತ್ರವಿಚಿತ್ರ ದಾಖಲೆಗಳನ್ನು ಮಾಡುತ್ತಾ ವಿಶ್ವದಾಖಲೆಗೆ ಪಾತ್ರರಾಗುವ ಅನೇಕ ಹವ್ಯಾಸೀ ಸಾಹಸಿಗರನ್ನು ನಾವು ದಿನನಿತ್ಯ ಕಾಣುತ್ತಿರುತ್ತೇವೆ. ಅಂತಹ ದಾಖಲೆಗಳ ಪಟ್ಟಿಗೆ ಹೊಸದೊಂದು ದಾಖಲೆ ಸೇರ್ಪಡೆಯಾಗಿದೆ. ಫ್ಲೋರಿಡಾದ ಲ್ಯಾಂಡರ್‌ಹಿಲ್ ಎಂಬಲ್ಲಿನ ಚಿಕ್ಕ ಅಂಗಡಿಯೊಂದರಲ್ಲಿ ಕೆಲಸಗಾರನಾಗಿ ಕಾರ್ಯನಿರ್ವಹಿಸುತ್ತಿರುವ ಜೋಯಲ್‌ಕೀರು ಎಂಬ ವ್ಯಕ್ತಿಯೇ ಇಂತಹ ಹೊಸ ವಿಶ್ವದಾಖಲೆ ಮಾಡಿದ ಸಾಧಕ.

ಈತ ಸುಮಾರು 1,75,000ಗಳಷ್ಟು ರಬ್ಬರ್ ಬ್ಯಾಂಡ್‌ಗಳನ್ನು ಬಳಸಿಕೊಂಡು ರಬ್ಬರ್ ಚೆಂಡು ಒಂದನ್ನು ನಿರ್ಮಿಸಿದ್ದು. ಅದು ಸುಮಾರು 8 ಅಡಿಗಳಷ್ಟು (2.4ಮೀಟರ್) ಎತ್ತರವಿದೆ. ಮತ್ತು 6.7 ಮೀಟರ್ (25 ಅಡಿ 4 ಇಂಚುಗಳಷ್ಟು) ವ್ಯಾಸವನ್ನು ಹೊಂದಿದೆ. ಸುಮಾರು 4097 ಕಿಲೋಗ್ರಾಂ (9032 ಪೌಂಡ್) ನಷ್ಟು ತೂಕವನ್ನು ಹೊಂದಿರುವ ಈ ರಬ್ಬರ್ ಚೆಂಡು 2008ರಲ್ಲಿಯೇ 'ಜಗತ್ತಿನ ಅತಿದೊಡ್ಡ ಮಾನವ ನಿರ್ಮಿತ ರಬ್ಬರ್ ಚೆಂಡು' ಎಂಬ ಕೀರ್ತಿಗೆ ಭಾಜನವಾಗಿತ್ತು. ಗಿನ್ನಿಸ್ ವಿಶ್ವದಾಖಲೆಗೂ ಸೇರ್ಪಡೆಗೊಂಡಿತು.

ಜೋಯಲ್‌ಕೀರು ತನ್ನ ಕೆಲಸದ ನಂತರದ ಬಿಡುವಿನ ವೇಳೆಯಲ್ಲಿ ಈ ಕಾರ್ಯವನ್ನು ಮಾಡಿದ್ದು ಇದಕ್ಕಾಗಿ ಇವನು ನವೆಂಬರ್ 2005 ರಿಂದ ನವೆಂಬರ್ 2006ರವರೆಗೆ ಒಂದು ವರ್ಷಕಾಲದಷ್ಟು ಸಮಯವನ್ನು ತೆಗೆದುಕೊಂಡಿದ್ದ. ಈ ಹಿಂದೆ 1999ರಲ್ಲಿ ಡೆಲಾವೇರ್ ಜಾನ್‌ಬೈನ್ ಎಂಬಲ್ಲಿ ಸ್ಟೀವ್‌ಮಿಲ್ಟನ್ ಎಂಬಾತ ಸುಮಾರು 85,000 ರಬ್ಬರ್ ಬ್ಯಾಂಡ್‌ಗಳನ್ನು ಬಳಸಿಕೊಂಡು ನಿರ್ಮಿಸಿದ್ದ 1600 ಕಿಲೋಗ್ರಾಂ ತೂಕದ ಚೆಂಡು ಇಲ್ಲಿಯವರೆಗಿನ ಅತಿದೊಡ್ಡ ರಬ್ಬರ್ ಚೆಂಡು ಎಂಬ ವಿಶ್ವದಾಖಲೆಗೆ ಪಾತ್ರವಾಗಿತ್ತು.

■ ಪ.ನಾ.ಹಳ್ಳಿ ಹರೀಶ್ ಕುಮಾರ್